**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮುಳಬಾಗಿಲು**

**ಸಿ.ಸಿ.ಸಂ.228/2018**

ಫಿರ್ಯಾದುದಾರರು ಃ- ಮುಳಬಾಗಿಲು ಗ್ರಾಮಾಂತರ ಪೋಲೀಸ್ ಠಾಣೆ

ವಿರುದ್ಧ

ಆರೋಪಿಗಳು ಃ-

1. ಮಂಜುನಾಥ, 30 ವರ್ಷ,
ಬಿನ್ ಲೇಟ್ ರಾಜಪ್ಪ,
ವಾಸಃ ಗಡಿನಕೊಪ್ಪ ಗ್ರಾಮ,
ತಗ್ಗರಿಸಿ ಅಂಚೆ, ಕುಚ್ಚಗದ್ದೆ ಹೋಬಳಿ,
ಸೊರಬ ತಾಲ್ಲೂಕು, ಶಿವಮೊಗ್ಗ.

2. ಮಾರುತಿ, 25 ವರ್ಷ,
ಬಿನ್ ಬಸನಪ್ಪ

3. ನಾಗರಾಜ, 20 ವರ್ಷ,
ಬಿನ್ ಲೇಟ್ ಯಲ್ಲಪ್ಪ,

4. ಕೃಷ್ಣ ಅಲಿಯಾಸ್ ಮುಂಗಣ್ಣ ಅಲಿಯಾಸ್ ಪಿಲ್ಲ
ಬಿನ್ ದುರ್ಗಪ್ಪ, 26 ವರ್ಷ,

ಆರೋಪಿ 2 ರಿಂದ 4 ರವರ
ವಾಸಃ ಹೀರೇಕೌನ್ಸಿ ಗ್ರಾಮ,
ಗೋಂಡಿ ಅಂಚೆ, ಹಾನಗಲ್ ತಾಲ್ಲೂಕು,
ಹಾವೇರಿ ಜಿಲ್ಲೆ.

5. ಮುನಿರತ್ನಂ ಎಂ.ಆರ್, 52 ವರ್ಷ,
ಬಿನ್ ಲೇಟ್ ರಾಮಕೃಷ್ಣಪ್ಪ

6. ದೇವೆಂದ್ರ.ಎಂ, 32 ವರ್ಷ,
ಬಿನ್ ಎಂ.ಆರ್.ಮುನಿರತ್ನಪ್ಪ

ಆರೋಪಿ 5 ಮತ್ತು 6 ರವರ
ವಾಸಃ ಬಿ.ಹೊಸಹಳ್ಳಿ ಗ್ರಾಮ,
ತಾಯಲೂರು ಹೋಬಳಿ,
ಮುಳಬಾಗಿಲು ತಾಲ್ಲೂಕು.

7. ದೀಪಕ್ ಅಲಿಯಾಸ್ ರವಿ 43 ವರ್ಷ,
ಬಿನ್ ಕೃಷ್ಣಪ್ಪ,
ವಾಸಃ ನಂ.453, ಪೇಮಸಾಯಿ ಲೇಔಟ್,
ಗಣೇಶ ದೇವಸ್ಥಾನದ ಹತ್ತಿರ, ಬೆಳ್ತೂರು,
ಕಾಡುಗೋಡಿ ಪೋಸ್ಟ್, ಹೊಸಕೋಟೆ ತಾಲ್ಲೂಕು,
ಬೆಂಗಳೂರು ಜಿಲ್ಲೆ.

8. ಮಧುಸೂದನ್, 20 ವರ್ಷ,
ಬಿನ್ ದಿಲಿಪ್ ಅಲಿಯಾಸ್ ದೀಪು
ವಾಸಃ ಬೆಳ್ತೂರು ಬಸ್ ನಿಲ್ದಾಣದ ಹತ್ತಿರ
ಕಾಡುಗೋಡಿ ಪೋಸ್ಟ್, ಹೊಸಕೋಟೆ ತಾಲ್ಲೂಕು,
ಬೆಂಗಳೂರು ಜಿಲ್ಲೆ.

ಃ ದೋಷಾರೋಪಣೆ ಃ

ಶ್ರೀಮತಿ ಸುಜಾತ ಸುವರ್ಣ, ಬಿ.ಕಾಂ, ಎಲ್.ಎಲ್.ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಮುಳಬಾಗಲು ಆದ ನಾನು ಈ ಮೂಲಕ ಕೆಳಕಂಡಂತೆ ಆಪಾದಿತರಾದ ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ.

ಮೊದಲನೆಯದಾಗಿ, ದಿನಾಂಕಃ 17.03.2018 ರಂದು ಬೆಳಿಗ್ಗೆ 11.00 ಗಂಟೆ ಸಮಯದಲ್ಲಿ ಆರೋಪಿತರಾದ ನೀವು ಮುಳಬಾಗಿಲು ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ, ಬೈರಸಂದ್ರ ಗ್ರಾಮದ ಸರ್ವೆ ನಂ.130 ರಲ್ಲಿನ ಜಮೀನಿನಲ್ಲಿರುವ ಶೆಡ್‌ನಲ್ಲಿ ಮದ್ಯ ತಯಾರಿಕೆ ಮಾಡಿ ಸಾಗಾಣಿಕೆ ಮಾಡಲು ಖಾಲಿ ರಟ್ಟಿನ ಪೆಟ್ಟಿಗೆಗಳು, 06 ನೀಲಿ ಬಣ್ಣದ ಖಾಲಿ ಪ್ಲಾಸ್ಟಿಕ್ ಬ್ಯಾರೆಲ್‌ಗಳು, 33 ಲೀಟರ್ ಸಾಮರ್ಥ್ಯದ 50 ಖಾಲಿ ಕ್ಯಾನ್‌ಗಳು, 05 ಲೀಟರ್ ಸಾಮರ್ಥ್ಯದ ಕಂದು ಬಣ್ಣದ ದ್ರಾವಕ, ಒಂದು ಕ್ರಿಯೇಟೀವ್ ಆರೋಮ್ಯಾಟಿಕ್ ದ್ರಾವಕ, ಒಂದು ಗಮ್, ಒಂದು ಕಪ್ಪು ಬಣ್ಣದ ಖಾಲಿ ಕವರ್‌ಗಳ ಬಂಡಲ್, ಒಂದು ನೀಲಿ ಬಣ್ಣದ ಪ್ಲಾಸ್ಟಿಕ್ ಬ್ಯಾರೆಲ್, ಒಂದು ನೀಲಿ ಬಣ್ಣದ ಪ್ಲಾಸ್ಟಿಕ್ ಬ್ಯಾರೆಲ್, ಒಂದು ರಟ್ಟಿನ ಪೆಟ್ಟಿಗೆಯಲ್ಲಿ ಮದ್ಯದ ಬಾಟಲ್‌ಗೆ ಹಾಕುವ ಮುಚ್ಚಳ (ಕಾರ್ಕ್), ರೆಡ್ ರೋಸ್ ಫೈನ್ ಬ್ರಾಂದಿ ಲೇಬಲ್‌ಗಳು, ಒಂದು ಪ್ಲಾಸ್ಟಿಕ್ ಚೀಲದಲ್ಲಿ ಕಂದು ಬಣ್ಣದ + ಗೋಲ್ಡ್ ಬಣ್ಣದ ಮುಚ್ಚಳ (ಕಾರ್ಕ್)ಗಳು, 48 ಗ್ರೀನ್ ಮ್ಯಾಜಿಕ್ ಬ್ರಾಂಧಿ ಬಾಟಲ್‌ಗಳು ಒಂದು ಬಾಟೆಲ್‌ಗಳಿಗೆ ತಡ್ರಿಂಗ್ ಮಾಡುವ ಯಂತ್ರ 36 ಪ್ಲಾಸ್ಟಿಕ್ ಕ್ಯಾನ್‌ಗಳಲ್ಲಿ ತುಂಬಿದ್ದ ಸ್ಪಿರಿಟ್, 110 ಪ್ಲಾಸ್ಟಿಕ್ ಕವರ್‌ಗಳಲ್ಲಿ ತುಂಬಿದ್ದ 1320 ಪ್ಲಾಸ್ಟಿಕ್ ಮದ್ಯದ

ಬಾಟೆಲ್‌ಗಳು ಗೋಲ್ಕಂಡ ಬ್ರಾಂದಿ ಎಂಬುದಾಗಿದ್ದು, 40 ರಟ್ಟಿನ ಪೆಟ್ಟಿಗೆಗಳು ಇದ್ದು ಪ್ರತಿ ಪೆಟ್ಟಿಗೆಯಲ್ಲಿ 100 ಖಾಲಿ ಪ್ಲಾಸ್ಟಿಕ್ ಬಾಟೆಲ್‌ಗಳಿದ್ದು, ಒಟ್ಟು 4000 ಖಾಲಿ ಬಾಟೆಲ್‌ಗಳನ್ನು ಇಟ್ಟುಕೊಂಡಿದ್ದು, 20 ಲೀಟರ್ ಸಾಮರ್ಥ್ಯದ ನೀರಿನ 40 ಕ್ಯಾನ್‌ಗಳು, ಒಂದು ರಟ್ಟಿನ ಪೆಟ್ಟಿಗೆಯಲ್ಲಿ ಗ್ರೀನ್ ಬ್ರಾಂದಿ ಎಂಬುದಾಗಿರುವ ಲೇಬಲ್‌ಗಳು ಹಾಗೂ ಗೋಲ್ಕಂಡ ಬ್ರಾಂದಿ ಎಂಬುದಾಗಿರುವ ಲೇಬಲ್‌ಗಳು ಇದ್ದು ಹಾಗೂ ಮದ್ಯದ ತೀಕ್ಷ್ಣತೆ ತೋರಿಸುವ ಒಂದು ಆಲ್ಕೋ ಮೀಟರ್ ಮತ್ತು ಪ್ಲಾಸ್ಟಿಕ್ ಜಾರ್‌ನ್ನು ಸಹ ಅಕ್ರಮವಾಗಿ ದಾಸ್ತಾನು ಮಾಡಿಕೊಂಡಿದ್ದ ಕಾರಣ ಅಬಕಾರಿ ಕಾಯ್ದೆ ಕಲಂ 34 ಕೆ.ಇ ಆಕ್ಟ್‌ನ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ.

ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳದಲ್ಲಿ ಆರೋಪಿತರಾದ ನೀವು ಪರವಾನಗಿ ಇಲ್ಲದೇ ಅನಧಿಕೃತವಾಗಿ ಮದ್ಯವನ್ನು ಸಿದ್ದಪಡಿಸಿ ಸಾಗಾಣಿಕೆ ಮಾಡಿ ಮಾರಾಟ ಮಾಡುತ್ತಿದ್ದ ಕಾರಣ ಅಬಕಾರಿ ಕಾಯ್ದೆ ಕಲಂ 32 ಕೆ.ಇ ಆಕ್ಟ್‌ನ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡುತ್ತೀರಿ ಎಂದು ಆಪಾದಿಸಲಾಗಿದೆ.

ಆದ್ದರಿಂದ ನೀವು ಈ ಮೇಲೆ ಹೇಳಿದ ಆರೋಪಿಗಳು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುತ್ತಿದ್ದು ಮೇಲ್ಕಂಡ ದಂಡನೀಯ ಅಪರಾಧಗಳ ಮೇಲೆ ಈ ನ್ಯಾಯಾಲಯದಿಂದ ವಿಚಾರಣೆಗೆ ಒಳಪಡತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ 16ನೇ ಮಾರ್ಚ್-2021

ಸಹಿ/-
(ಸುಜಾತ ಸುವರ್ಣ.ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಮುಳಬಾಗಿಲು.